ಕುಡಿಯುವ ನೀರಿನ ಯೋಜನೆಗಾಗಿ ಪರಗೋಡು ಗ್ರಾಮದ ಹತ್ತಿರವಿರುವ ಚಿತ್ರಾವತಿ ನದಿ ನೀರನ್ನು ಬಳಸಿಕೊಂಡು ನೀರೊದಗಿಸುವ ಯೋಜನೆಗೆ ಸರ್ಕಾರವು ಆದಿಸೂಚನೆ ಸಂಖ್ಯೆ. ನಆಇ 91 ಯುಡಬ್ಲ್ಯೂ ಎಸ್ 2002, ದಿನಾಂಕ 14.11.2002 ರಲ್ಲಿ ರೂ. 606.84 ಲಕ್ಷಗಳಿಗೆ ಕೇಂದ್ರ ಸರ್ಕಾರದ ತ್ವರಿತ ನಗರ ನೀರು ಸರಬರಾಜು ಯೋಜನೆಯಡಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಆದರೆ ಇದುವರೆವಿಗೂ ಕಾಮಗಾರಿ ಕೈಗೊಳ್ಳಲು ಕೇಂದ್ರಸರ್ಕಾರದಿಂದ ಅನುದಾನವು ಬಿಡುಗಡೆಯಾಗಿರುವುದಿಲ್ಲ.

ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಚಿತ್ರಾವತಿ ನದಿಗೆ ಅಡ್ಡಲಾಗಿ ಹೊಸಕೆರೆ ನಿರ್ಮಾಣ ಮಾಡುವ ಯೋಜನೆಯನ್ನು ಕೈಗೊಳ್ಳಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಯೋಜನೆಯ ಶೇ. 50 ರಷ್ಟು ವೆಚ್ಚವನ್ನು ಅಂದರೆ ರೂ. 483.09 ಲಕ್ಷಗಳನ್ನು ಭರಿಸಿದ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಹಾಗೆಯೇ ಗುಡಿಬಂಡೆ ಪಟ್ಟಣಕ್ಕೆ ತ್ವರಿತ ನೀರು ಸರಬರಾಜು ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾದ ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

ವಾಯುಮಾಲಿನ್ಯ ತಪಾಸಣೆ

2125 (2517) - ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಾದ್ಯಂತ ವಾಯುಮಾಲಿನ್ಯ ತಪಾಸಣಾ ಕಾರ್ಯವನ್ನು ಯಾವ ಯಾವ ಕಂಪನಿಯ ಮೂಲಕ ಖಾಸಗಿಯವರಿಗೆ ವಹಿಸಲಾಗಿದೆ; ವಿವರ ಒದಗಿಸುವುದು;

ಆ) ಖಾಸಗಿಯವರು ವಾಯುಮಾಲಿನ್ಯದ ಕಾರ್ಯವನ್ನು ಸರಿಯಾಗಿ ನಿರ್ವಹಿಸದೇ ಅತೀ ಹೆಚ್ಚಿನ ಪ್ರಮಾಣದಲ್ಲಿ ಹೊಗೆಯನ್ನು ಹೊರಹೊಮ್ಮುತ್ತದೆ ಎಂಬ ಪ್ರಮಾಣ ಪತ್ರವನ್ನು ತಪ್ಪಾಗಿ ನೀಡಿ ಅಧಿಕ ಪ್ರಮಾಣದಲ್ಲಿ ಹಣವನ್ನು ಗಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಇಂತಹ ಖಾಸಗೀ ವಾಯುಮಾಲಿನ್ಯ ಸಂಸ್ಥೆಗಳ ವಿರುದ್ಧ ಕೈಗೊಂಡಿರುವ ಕ್ರಮವೇನು?

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಯಾವ ಯಾವ ಖಾಸಗೀ ಮಾಲೀಕರಿಗೆ ವಹಿಸಿಕೊಡಲಾಗಿದೆ; ವಿವರ ಒದಗಿಸುವುದು; ಇವರಿಂದ ಬರುತ್ತಿರುವ ಲಾಭದ ಪ್ರಮಾಣವೆಷ್ಟು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು):

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು 323 ವಾಯುಮಾಲಿನ್ಯ ತಪಾಸಣಾ ಕೇಂದ್ರಗಳಿಗೆ ಅನುಮತಿ ನೀಡಲಾಗಿದೆ. ಇವುಗಳಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಿ ಸಂಸ್ಥೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ಇತರೆ ಖಾಸಗೀಯವರಿಗೆ ಅನುಜ್ಞಾ ಪತ್ರ ನೀಡಲಾಗಿದೆ.

ಆ) ಕಾನೂನು ಬಾಹಿರವಾಗಿ ನಡೆದುಕೊಂಡ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳ ಅನುಜ್ಞಾ ಪತ್ರವನ್ನು ಅಮಾನತ್ತು ಅಥವಾ ರದ್ದುಗೊಳಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕ.ರಾ. ರ.ಸಾ. ಸಂಸ್ಥೆಯು ತನ್ನ ಬಸ್‌ಗಳನ್ನು ಹೊಗೆ ತಪಾಸಣೆಗಾಗಿ ಖಾಸಗಿ ತಪಾಸಣಾ ಕೇಂದ್ರಕ್ಕೆ ಕಳುಹಿಸುವುದಿಲ್ಲ. ಕ.ರಾ.ರ.ಸಾ.ಸಂಸ್ಥೆ ಹಾಗೂ ಅದರ ಸಂಘ ಸಂಸ್ಥೆಗಳು ತನ್ನ ಎಲ್ಲಾ ಘಟಕಗಳು ಹಾಗೂ ವಿಭಾಗ ಕಾರ್ಯಾಗಾರದಲ್ಲಿ ವಾಯು ಮಾಲಿನ್ಯ ತಪಾಸಣಾ ಯಂತ್ರವನ್ನು ಹೊಂದಿರುತ್ತದೆ. ಈ ತಪಾಸಣೆಯನ್ನು ನಡೆಸಲು ಹಾಗೂ ಪ್ರಮಾಣ ಪತ್ರವನ್ನು ನೀಡಲು ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಸಾರಿಗೆ ಇಲಾಖೆಯು ಅನುಮತಿಯನ್ನು ನೀಡಿರುತ್ತಾರೆ.

ಸಂಸ್ಥೆಯ ಎಲ್ಲಾ ಬಸ್‌ಗಳು ವಾಯು ಮಾಲಿನ್ಯ ತಪಾಸಣೆಗೆ ತಿಂಗಳಿಗೊಮ್ಮೆ ಒಳಪಡುತ್ತದೆ ಹಾಗೂ ಈ ತಪಾಸಣೆ ಆಗಿರುವ ಹಿನ್ನೆಲೆಯಲ್ಲಿ ಮಾಲಿನ್ಯರಹಿತ ಸ್ಟೀಕರ್‌ಗಳನ್ನು ಸಹ ಎಲ್ಲಾ ವಾಹನಗಳಿಗೆ ಅಳವಡಿಸಲಾಗುತ್ತದೆ.

ಬಾಗೇಪಲ್ಲಿ ತಾಲ್ಲೂಕಿನ ಕೆರೆಗಳ ಅಭಿವೃದ್ಧಿ

2126 (2518) - ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂರು ವರ್ಷಗಳಿಂದ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ಕೆರೆಗಳ ಅಭಿವೃದ್ಧಿ ಮಾಡಲಾಗಿದೆ; ವಿವರ ಒದಗಿಸುವುದು; ಈ ಅಭಿವೃದ್ಧಿ ಕಾರ್ಯಕ್ಕೆ ಸರ್ಕಾರವು ಈಗ ವ್ಯಯ ಮಾಡಿರುವ ವೆಚ್ಚವೆಷ್ಟು;

ಆ) ಇದೇ ಕ್ಷೇತ್ರದಲ್ಲಿ ಕಾಲುವೆಗಳು ಇಲ್ಲದೇ, ಹೂಳು ಅಧಿಕ ತುಂಬಿದ್ದು ಇದರ ಅಭಿವೃದ್ಧಿಗೆ ಸೂಕ್ತ ಗಮನ ಹರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಾಲುವೆಗಳ ಕಿ.ಮೀ.ವಾರು ಎಷ್ಟು ವ್ಯಾಪ್ತಿ ಹೊಂದಿದೆ ಹಾಗೂ ಯಾವ ಯಾವ ಕೆರೆಗಳಲ್ಲಿ ಹೂಳು ತುಂಬಿದೆ: ಎಷ್ಟು ಕೆರಗಳಲ್ಲಿ ಹೂಳುಗಳನ್ನು ತೆಗೆದು ಅಭಿವೃದ್ಧಿಗೊಳಿಸಲಾಗಿದೆ; ಇದಕ್ಕೆ ಮಾಡಿರುವ ವೆಚ್ಚವೆಷ್ಟು; ವಿವರ ಒದಗಿಸುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ 19 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗಿದೆ. ಈ ಕೆರೆಗಳ ಅಭಿವೃದ್ಧಿ ಕಾರ್ಯಕ್ಕೆ ರೂ. 187.8 ಲಕ್ಷ ವೆಚ್ಚ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಬಾಗೇಪಲ್ಲಿ ಮತ ಕ್ಷೇತ್ರದಲ್ಲಿ ಒಟ್ಟು 49 ಸಣ್ಣ ನೀರಾವರಿ ಕೆರೆಗಳಿದ್ದು ಅಂಡಮಾನ್ ಹೊಸಕೆರೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಕೆರೆಗಳಿಗೂ ಕಾಲುವೆಗಳನ್ನು ನಿರ್ಮಿಸಿದ್ದು, ಪ್ರತಿ ವರ್ಷ ವಾರ್ಷಿಕ ನಿರ್ವಹಣೆಗೆ ಸಾಕಷ್ಟು ಅನುದಾನ ಲಭ್ಯವಿಲ್ಲದ ಕಾರಣ ಸಮರ್ಪಕವಾಗಿ ನಿರ್ವಹಣೆ ಆಗದೆ ಎಲ್ಲಾ 48 ಕೆರೆಗಳ ಕಾಲುವೆಗಳಲ್ಲಿ ಹೂಳು ತುಂಬಿದೆ. ರೈತ ಕಾಯಕ ಕೆರೆ ಯೋಜನೆ ಅಡಿಯಲ್ಲಿ ಪ್ರತಿ ಹೋಬಳಿಗೊಂದು ಕೆರೆಯಂತೆ 745 ಕೆರೆಗಳನ್ನು ರೂ. 195 ಕೋಟಿ ವೆಚ್ಚದಲ್ಲಿ ಹೂಳು ತೆಗೆಯುವುದು ಸೇರಿದಂತೆ ಪುನರುಜ್ಜೀವನಗೊಳಿಸಲು ಸರ್ಕಾರ ಅನುಮೋದನೆ ನೀಡಿರುತ್ತದೆ.

ಇ) ಒಟ್ಟು 48 ಸಣ್ಣ ನೀರಾವರಿ ಕೆರೆಗಳ ಕಾಲುವೆಗಳಲ್ಲಿ ಸುಮಾರು 28.46 ಕಿ.ಮೀ. ಮುಖ್ಯ ಕಾಲುವೆ ಹಾಗೂ 119.65 ಕಿ.ಮೀ. ಉಪ ಕಾಲುವೆಗಳಿರುತ್ತವೆ. ಅಂದರೆ ಕಾಲುವೆಗಳ